**8ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**
**ಬೆಂಗಳೂರು ನಗರ**
**ಸಿ.ಸಿ.ನಂ.17514/2020**

**ಸಿಡಬ್ಲ್ಯೂ-6, ಪಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಶ್ರೀ ಮಹೇಶ |
| ತಂದೆಯ /ಗಂಡನ ಹೆಸರು | - | ಸಿದ್ದನಾಯಕ |
| ವಯಸ್ಸು | - | 37 ವರ್ಷ |
| ಕೆಲಸ | - | ಹೆಚ್ ಸಿ, ಆರ್ ಟಿ ನಗರ ಪಿಎಸ್ |
| ವಾಸ | - | ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 07-10-2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಹಿರಿಯ ಸಹಾಯಕ ಸಾರ್ವಜನಿಕ ಅಭಿಯೋಜಕರವರಿಂದಃ**

ನಾನು 2018 ರಿಂದ 2022 ರವರೆಗೆ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 03-12-2019 ರಂದು ಬೆಳಿಗ್ಗೆ 10-50 ಗಂಟೆಗೆ ಠಾಣೆಯ ಪಿಐ ರವರಾದ ಚಾಸಾ 1 ರವರು ಕರೆ ಮಾಡಿ ಹೆಬ್ಬಾಳ ಬಸ್ ನಿಲ್ದಾಣದ ಹತ್ತಿರ ಬರುವಂತೆ ಆದೇಶ ಮಾಡಿರುತ್ತಾರೆ. ಅದರಂತೆ ನಾನು ಬಸ್ ನಿಲ್ದಾಣದ ಹತ್ತಿರ ಹೋದಾಗ ಚಾಸಾ 1 ರವರಿಗೆ ಜಿಂಕೆ ಕೊಂಬನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದ ಮೇರೆಗೆ ಠಾಣೆಗೆ ಹೋಗಿ ಐ ಓ ಕಿಟ್ಟನ್ನು ತಿಳಿಸಿದ ಮೇರೆಗೆ ನಾನು ಠಾಣೆಗೆ ಹೋಗಿ ತಂದಿರುತ್ತೇನೆ. ಚಾಸಾ 1 ರವರೇ ಈ ಕೇಸಿನಲ್ಲಿ ಪಂಚ ಸಾಕ್ಷಿಗಳನ್ನು ಹೆಬ್ಬಾಳ ಬಸ್ ನಿಲ್ದಾಣದಿಂದ ಕರೆ ತಂದಿರುತ್ತಾರೆ. ಸ್ಥಳದಲ್ಲೇ ಪಂಚರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ನೋಟೀಸನ್ನು ನೀಡಿದ ನಂತರ ಅವರು ಪಂಚಸಾಕ್ಷಿಯಾಗಲು ಒಪ್ಪಿರುತ್ತಾರೆ. ಸದರಿ ಬಸ್ ನಿಲ್ದಾಣದಿಂದ ಮಾಹಿತಿ ಬಂದ ಸ್ಥಳವಾದ ಹೆಬ್ಬಾಳ ರೈಲ್ವೇ ಟ್ರಾಕ್ ಪಿಳ್ಳೆಕಮ್ಮ ದೇವಸ್ಥಾನದ ಹತ್ತಿರ 11-30 ಕ್ಕೆ ಬಿಟ್ಟು 11-40 ಕ್ಕೆ ಅಲ್ಲಿ ಹೋಗಿರುತ್ತೇವೆ. ದೂರದಲ್ಲಿ ನಿಂತು ಬಂದ ಮಾಹಿತಿಯನ್ನು ಖಚಿತಪಡಿಸಿಕೊಂಡು ಅಲ್ಲಿದ್ದ ಮೂರು ಜನರನ್ನು ನಾನು, ಚಾಸಾ 1 ಮತ್ತು ಚಾಸಾ 7 ರಿಂದ 9 ರವರು ಸುತ್ತುವರಿದು

ಹಿಡಿದಿರುತ್ತೇವೆ. ನಂತರ ಚಾಸಾ 1 ರವರು ಅವರ ಕೈಯಲ್ಲಿದ್ದ ಬಿಳಿ ಚೀಲವನ್ನು ವಶಕ್ಕೆ ಪಡೆದುಕೊಂಡು ನಂತರ ಮೂರು ಜನ ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಚೌಡಪ್ಪ, ಹರೀಶ್ ಮತ್ತು ಸಫೀವುಲ್ಲಾ ಎಂದು ತಿಳಿಸಿರುತ್ತಾರೆ. ನನ್ನ ಮತ್ತು ದಾಳಿಗೆ ಹೋಗಿರುವ ಎಲ್ಲಾ ವ್ಯಕ್ತಿಗಳ ಸಮಕ್ಷಮದಲ್ಲಿ ಚಾಸಾ 1 ರವರು ಬಿಳಿ ಚೀಲವನ್ನು ತೆರೆದು ನೋಡಿ ಅದರಲ್ಲಿ ಒಂದು ಜಿಂಕೆ ಕೊಂಬು ಇರುವುದು ಕಂಡು ಬಂದ ನಂತರ ಅದನ್ನು ಅರಗಿನಿಂದ ಸದರಿ ಚೀಲದ ಬಾಯನ್ನು ಕಟ್ಟಿ ಹೆಚ್ ಬಿ ಎಲ್ ಎಂದು ಗುರುತನ್ನು ಹಾಕಿ ಕಟ್ಟಿರುತ್ತೇವೆ. ಅದರ ಮೇಲೆ ಬಿಳಿ ಹಾಳೆಯಲ್ಲಿ ಪಂಚರ ಸಹಿ ಪಡೆದು ಅವರ ವಿವರಗಳನ್ನು ಬರೆದಿರುತ್ತೇವೆ. ನಂತರ ಚಾಸಾ 1 ರವರು ಠಾಣೆಗೆ ಹಾಜರಾಗಿ ಆರೋಪಿಗಳು ಮತ್ತು ಮಾಲುಗಳೊಂದಿಗೆ ವರದಿಯೊಂದಿಗೆ ಪ್ರಕರಣ ದಾಖಲು ಮಾಡಲು ಠಾಣಾಧಿಕಾರಿಗಳಿಗೆ ಕೊಟ್ಟಿರುತ್ತಾರೆ.

ನ್ಯಾಯಾಲಯದ ಮುಂದೆ ಇರುವ 1 ಮತ್ತು 3ನೇ ಆರೋಪಿತರನ್ನು ನೋಡಿ ಸಾಕ್ಷಿ ಗುರ್ತಿಸಿರುತ್ತಾರೆ.

ಈ ಹಂತದಲ್ಲಿ ಮಾಲು ಇಲ್ಲದೇ ಇರುವುದು ಕಂಡು ಬಂದಿರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಗಿದೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿಸಹಿ ಮಾಡಲಾಗಿದೆ.)

**ಓ ಹೇ ಕೇ ಸ ಇ ಒ**

**8ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಬೆಂಗಳೂರು ನಗರ.**